ಜಿಲ್ಲಾ ಪೊಲೀಸ್ ಕಛೇರಿ, ಚಿತ್ರದುರ್ಗ

DISTRICT POLICE OFFICE, CHITRADURGA

Phone No:08194-222437 Email ID:ssactcta@ksp.gov.in

ಸಂಖ್ಯೆ:ಲೆಕ್ಕ-3/ಕಟ್ಟಡ/354/2020-21. ದಿನಾಂಕ:02-12-2020

## ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ

ವಿಷಯ: ಚಿತ್ರದುರ್ಗ ಜಿಲ್ಲಾ ಪೊಲೀಸ್ ಘಟಕದ ಶಿಥಿಲಾವಸ್ಥೆಯಲ್ಲಿರುವ ಡಿಎಆರ್ ಘಟಕದ ಸಿ ಬ್ಲಾಕ್‌ನ 23 ವಸತಿಗೃಹಗಳನ್ನು ನೆಲಸಮಗೊಳಿಸಿ ಮತ್ತು ಅದರಿಂದ ದೊರಕುವ ಸಾಮಾಗ್ರಿಗಳನ್ನು ಟೆಂಡರ್ ಕಮ್ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ ಪೊಲೀಸ್ ಪ್ರಧಾನ ಕಛೇರಿಯ ನಡವಳಿ ಆದೇಶ ಸಂಖ್ಯೆ:ಬಿ3ಸಿ/407/2013-14. ದಿನಾಂಕ:01-06-2020.

*****

ಚಿತ್ರದುರ್ಗ ಜಿಲ್ಲೆಯ ಪೊಲೀಸ್ ಇಲಾಖೆಗೆ ಸಂಬಂಧಿಸಿದ ಕೆಳಕಂಡ ಡಿ.ಎ.ಆರ್ ಘಟಕದ ಹಳೆಯ ಶಿಥಿಲಾವಸ್ಥೆಯಲ್ಲಿರುವ ವಸತಿಗೃಹಗಳನ್ನು ನೆಲಸಮಗೊಳಿಸಬೇಕಾಗಿರುತ್ತದೆ. ಈ ಕಟ್ಟಡಗಳನ್ನು ನೆಲಸಮಗೊಳಿಸಲು ಮತ್ತು ಅದರಿಂದ ದೊರಕುವ ಬಾಗಿಲು,ಕಿಟಕಿ, ಮರದ ವಸ್ತುಗಳು, ಕಬ್ಬಿಣ, ಕಲ್ಲು, ಇತ್ಯಾಧಿಗಳನ್ನು ಟೆಂಡರ್ ಕಮ್ ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲಾಗುವುದು.

| ಕ್ರಸಂ | ಬ್ಲಾಕ್‌ನ ವಿವರ | ಒಟ್ಟು ವಸತಿಗೃಹಗಳು |
|---|---|---|
| 01 | ಡಿ.ಎ.ಆರ್ ಬಾರ್‌ಲೈನ್ ಪ್ರದೇಶದಲ್ಲಿರುವ ಸಿ ಬ್ಲಾಕ್‌ನ ವಸತಿಗೃಹಗಳು (ವಸತಿಗೃಹ ಸಂಖ್ಯೆ: 33 ರಿಂದ 55.) | 23 |

1. ಮೇಲ್ಕಂಡ ಪೊಲೀಸ್ ಕಟ್ಟಡ/ವಸತಿಗೃಹಗಳನ್ನು (1) ಪೂರ್ತಿಯಾಗಿ ನೆಲಸಮ ಮಾಡಿಕೊಡಲು ಹಾಗೂ ಕಟ್ಟಡಗಳ ತ್ಯಾಜ್ಯ ಮತ್ತು ಮಣ್ಣನ್ನು ತೆರವುಗೊಳಿಸಲು ಆಗುವ ವೆಚ್ಚ ಮತ್ತು (2) ಅದರಿಂದ ದೊರಕುವ ಸಾಮಾಗ್ರಿಗಳನ್ನು ತೆಗೆದುಕೊಂಡು ಹೋಗಲು ಅದಕ್ಕೆ ತಗಲುವ ಬೆಲೆಗಳನ್ನು ಪ್ರತ್ಯೇಕವಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮುಚ್ಚಿದ ಲಕೋಟೆಯಲ್ಲಿ (ಸೀಲ್ ಮಾಡಿದ) ಟೆಂಡರ್ ಸಲ್ಲಿಸುವುದು. ಇ.ಎಂ.ಡಿ ಯಾಗಿ 10,000/- ರೂಗಳನ್ನು ಪೊಲೀಸ್ ಅಧೀಕ್ಷಕರು ಚಿತ್ರದುರ್ಗ ರವರ ಹೆಸರಿಗೆ ಪಡೆದ ಡಿಡಿ ಯೊಂದಿಗೆ ತಮ್ಮ ಟೆಂಡರ್ ಅನ್ನು ಸಲ್ಲಿಸುವುದು. ಲಕೋಟೆಯ ಮೇಲ್ಭಾಗದಲ್ಲಿ " ಪೊಲೀಸ್ ಕಟ್ಟಡ ನೆಲಸಮಗೊಳಿಸುವ ಕುರಿತು" ಎಂಬುದಾಗಿ ನಮೂದಿಸುವುದು.
2. ಟೆಂಡರ್ ಫಾರಂನಲ್ಲಿ ಅತೀ ಹೆಚ್ಚಿನ ದರವನ್ನು ಅಂಕಿ ಮತ್ತು ಅಕ್ಷರಗಳಲ್ಲಿಯೂ ಬರೆದಿರಬೇಕು ಟೆಂಡರ್ ಫಾರಂನಲ್ಲಿ ಬೆಲೆಯನ್ನು ಬರೆಯುವಾಗ ಏನಾದರೂ ತಿದ್ದುಪಡಿ ಇದ್ದರೆ ಆ ಸ್ಥಳದಲ್ಲಿಯೇ ಟೆಂಡರ್‌ದಾರರ ಪೂರ್ಣ ಸಹಿ ಮಾಡತಕ್ಕದ್ದು ಟೆಂಡರ್ ಫಾರಂಗಳನ್ನು ವರ್ಗಾವಣೆ ಮಾಡಲಾಗುವುದಿಲ್ಲ.
3. ಟೆಂಡರ್‌ನ್ನು ಸಲ್ಲಿಸಿದ ಬಿಡ್‌ದಾರರು ತಮ್ಮ ಟೆಂಡರ್ ಮೊತ್ತ ವ್ಯತ್ಯಾಸ ಅನಿಸಿದಲ್ಲಿ ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಬಿಡ್ ಮಾಡಬಹುದಾಗಿದೆ.
4. **ದಿನಾಂಕ:05-01-2021** ರಂದು ಸಾರ್ವಜನಿಕ ಹರಾಜು ನಿಗದಿಪಡಿಸಲಾಗಿದೆ. ಟೆಂಡರ್‌ದಾರರು **ದಿನಾಂಕ:04-01-2021 ರಂದು ಬೆಳಗ್ಗೆ 11.00 ಗಂಟೆಯ** ಒಳಗಾಗಿ ಲಕೋಟೆಯನ್ನು ಖುದ್ದಾಗಿ ಜಿಲ್ಲಾ ಪೊಲೀಸ್ ಕಛೇರಿ, ಚಿತ್ರದುರ್ಗ ಇಲ್ಲಿಗೆ ತಲುಪಿಸತಕ್ಕದ್ದು.
5. ಸಾರ್ವಜನಿಕರು ನೆಲಸಮಗೊಳಿಸುವ ಕಟ್ಟಡ/ ಹಾಗೂ ವಸತಿ ಗೃಹಗಳನ್ನು ಮೇಲೆ ಸೂಚಿಸಿದ ಸ್ಥಳದಲ್ಲಿ ವೀಕ್ಷಿಸಬಹುದಾಗಿದೆ ಮತ್ತು ಹೆಚ್ಚಿನ ವಿವರಗಳಿಗೆ ಡಿಎಸ್‌ಪಿ ಡಿಎಆರ್ ಚಿತ್ರದುರ್ಗ ರವರನ್ನು ಹಾಗೂ ಜಿಲ್ಲಾ ಪೊಲೀಸ್ ಕಛೇರಿ ಚಿತ್ರದುರ್ಗದಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.
6. ಒಟ್ಟಾಗಿ ಮೇಲ್ಕಂಡ ಎಲ್ಲಾ ಡಿಎಆರ್ ಪೊಲೀಸ್ ವಸತಿಗೃಹಗಳನ್ನು ನೆಲಸಮ ಹಾಗೂ ಸಾಮಾಗ್ರಿಗಳ ಸಾರ್ವಜನಿಕ ಬಹಿರಂಗ ಹರಾಜನ್ನು **ದಿನಾಂಕ:05-01-2021 ರಂದು ಬೆಳಗ್ಗೆ 11.00 ಗಂಟೆಗೆ** ಡಿಎಆರ್ ಕಛೇರಿ ಆವರಣ ಬಾರ್‌ಲೈನ್ ಪ್ರದೇಶ ಚಿತ್ರದುರ್ಗದಲ್ಲಿ ಏರ್ಪಡಿಸಲಾಗಿದೆ. ಹರಾಜಿನಲ್ಲಿ ಭಾಗವಹಿಸುವ ಪ್ರತಿಯೊಬ್ಬರು ನಗದಾಗಿ ರೂ 10,000/- ಗಳ ಇ.ಎಂ.ಡಿ ಹಣವನ್ನು 10.30 ಗಂಟೆಯ ಒಳಗಾಗಿ ಸ್ಥಳದಲ್ಲಿಯೇ ಪಾವತಿಸತಕ್ಕದ್ದು.

7. ಟೆಂಡರ್ ಅಥವಾ ಬಹಿರಂಗ ಹರಾಜಿನಲ್ಲಿ ಕಟ್ಟಡ/ವಸತಿಗೃಹಗಳನ್ನು ನೆಲಸಮ ಮಾಡಿಕೊಡಲು ಕಡಿಮೆ ಮೊತ್ತವನ್ನು ಮತ್ತು ಸಾಮಾಗ್ರಿಗಳನ್ನು ಪಡೆಯಲು ಹೆಚ್ಚಿನ ಮೊತ್ತವನ್ನು ಯಾರೂ ನಮೂದಿಸಿರುತ್ತಾರೆಯೋ/ಬಿಡ್ ಕೂಗಿರುತ್ತಾರೆಯೋ ಅವರಿಗೆ ವಹಿಸಿಕೊಡಲಾಗುವುದು.

8. ಹರಾಜು ಪಾರಂಭವಾದ ನಂತರ ಬಿಡ್‌ದಾರರಿಂದ ಇ.ಎಂ.ಡಿ ಹಣ ಸ್ವೀಕರಿಸುವುದಿಲ್ಲ. ಹಾಗೂ ಇ.ಎಂ.ಡಿ ಠೇವಣಿ ಇಡದೇ ಇರುವವರು ಹರಾಜಿನಲ್ಲಿ ಭಾಗವಹಿಸುವಂತಿಲ್ಲ.

9. ಹೆಚ್ಚಿನ ಮೊತ್ತದ ಬಿಡ್‌ದಾರರು ಶೇ 25 ರಷ್ಟು ಮೊತ್ತವನ್ನು ಸ್ಥಳದಲ್ಲಿಯೇ ಪಾವತಿ ಮಾಡಬೇಕಾಗಿರುತ್ತದೆ. ಹರಾಜು ಮುಗಿದ ತಕ್ಷಣವೇ ಯಶಸ್ವಿಯಾಗದೇ ಇರುವ ಬಿಡ್‌ದಾರರ ಠೇವಣಿಯನ್ನು ಸ್ಥಳದಲ್ಲಿಯೇ ಹಿಂದಿರುಗಿಸಲಾಗುವುದು.

10. ನೆಲಸಮ/ಸಾಮಾಗ್ರಿಗಳನ್ನು ಪಡೆಯಲು ಸರ್ಕಾರದಿಂದ ವಿಧಿಸಬಹುದಾದ ತೆರಿಗೆ ಹಾಗೂ ಜಿಎಸ್‌ಟಿ ತೆರಿಗೆಗಳಿಗೆ ಯಶಸ್ವಿ ಬಿಡ್‌ದಾರರು ಬದ್ದರಾಗಿರತಕ್ಕದು. ಯಶಸ್ವಿ ಬಿಡ್‌ದಾರರು ನಿಯಮಾನುಸಾರ ಸರ್ಕಾರಕ್ಕೆ ಪಾವತಿ ಮಾಡುವ ಜಿಎಸ್‌ಟಿ ಮೊತ್ತವನ್ನು ಸ್ವತಃ ಪಾವತಿ ಮಾಡಿ ಜಿಲ್ಲಾ ಪೊಲೀಸ್ ಕಛೇರಿಗೆ ದಾಖಲೆಯನ್ನು ಸಲ್ಲಿಸತಕ್ಕದ್ದು.

11. ಟೆಂಡರು ಅಥವಾ ಹರಾಜಿನಲ್ಲಿ ಭಾಗವಹಿಸಿ ಯಶಸ್ವಿಯಾದ ಬಿಡ್‌ದಾರರ ತಪ್ಪು ಗ್ರಹಿಕೆಯಿಂದ ಇಲಾಖೆಗೆ ನಷ್ಟವಾಗುವಂತಹ ಸಂದರ್ಭದಲ್ಲಿ ಉದ್ಭವಿಸಿದಲ್ಲಿ ಅಂತಹ ಟೆಂಡರುದಾರರು ಮುಂಗಡವಾಗಿ ಕಟ್ಟಲಾದ ಹಣದಲ್ಲಿ ವಸೂಲಿ ಮಾಡುವ ಅಧಿಕಾರವನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರು ಚಿತ್ರದುರ್ಗ ರವರ ತೀರ್ಮಾನಕ್ಕೆ ಒಳಪಟ್ಟಿರುತ್ತದೆ. ಹಾಗೂ ಅಂತಹ ವಸೂಲಿ ಮಾಡಲು ತೀರ್ಮಾನಿಸಿದ ಹಣವನ್ನು ಸ್ಥಳದಲ್ಲಿಯೇ ಪಾವತಿಸತಕ್ಕದ್ದು. ತಪ್ಪಿದಲ್ಲಿ ಸಂಬಂಧಪಟ್ಟವರ ಮೇಲೆ ಕಾನೂನು ಬದ್ದವಾಗಿ ಕ್ರಮಕೈಗೊಳ್ಳಲಾಗುವುದು.

12. ಟೆಂಡರ್ ಮತ್ತು ಬಹಿರಂಗ ಹರಾಜುಗಳ ಹಾಗೂ ಎಲ್ಲಾ ವಿಷಯದಲ್ಲಿ ರದ್ದುಗೊಳಿಸುವ ನಿರ್ಣಯ/ಕಾರ್ಯಗತಗೊಳಿಸುವ ಮತ್ತು ಯಾವುದೇ ವಿವಾದ ವಿಷಯ ಉದ್ಭವಿಸಿದಲ್ಲಿ ಪೊಲೀಸ್ ಅಧೀಕ್ಷಕರು ಚಿತ್ರದುರ್ಗ ಜಿಲ್ಲೆ ರವರ ಕೈಗೊಳ್ಳುವ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.

13 ಹರಾಜಿನಲ್ಲಿ ಭಾಗವಹಿಸುವ ಎಲ್ಲಾ ಬಿಡ್‌ದಾರರು ತಮ್ಮ ಪೂರ್ಣ ವಿಳಾಸ. ಮೊಬೈಲ್ ಸಂಖ್ಯೆ. ಹಾಗೂ ಟಿನ್/ಜಿಎಸ್‌ಟಿ ಸಂಖ್ಯೆಗಳನ್ನು ಬರೆದಿರುವ ಚೀಟಿಯೊಂದಿಗೆ ಠೇವಣಿ ಹಣವನ್ನು ಪಾವತಿ ಮಾಡತಕ್ಕದ್ದು. ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್‌ದಾರರ ಜಿಎಸ್‌ಟಿ ನಂಬರ್ ನೋಂದಣಿಯಾಗಿರಬೇಕು.

14 ಹರಾಜು ಮಾಡುವ ವೇಳೆಯಲ್ಲಿ ವಾದ-ವಿವಾದಗಳು ಉದ್ಭವಿಸಿದಲ್ಲಿ ಪೊಲೀಸ್ ಅಧೀಕ್ಷಕರು ಚಿತ್ರದುರ್ಗ ಜಿಲ್ಲೆ ರವರ ತೀರ್ಮಾನವೇ ಅಂತಿಮವಾಗಿರುತ್ತದೆ.

15 ಹರಾಜಿನಲ್ಲಿ ಭಾಗವಹಿಸುವ ಸಾರ್ವನಿಕರು ಇಲಾಖೆಯ ನಿಯಮಗಳಿಗೆ ಬದ್ದರಾಗಿರತಕ್ಕದು.

16 ಹರಾಜಿನಲ್ಲಿ ಯಾವುದೇ ಸವಾಲನ್ನು ಯಾವುದೇ ಕಾರಣಕ್ಕೆ ರದ್ದು ಮಾಡುವ ಇಲ್ಲವೇ ತಿರಸ್ಕರಿಸುವ ಅಧಿಕಾರವನ್ನು ಪೊಲೀಸ್ ಅಧೀಕ್ಷಕರು ಚಿತ್ರದುರ್ಗ ರವರು ಹೊಂದಿರುತ್ತಾರೆ. ಮತ್ತು ಅವರ ತೀರ್ಮಾನವೇ ಅಂತಿಮವಾಗಿರುತ್ತದೆ.

17 ಹೆಚ್ಚಿನ ಮಾಹಿತಿ ಬೇಕಾದಲ್ಲಿ ಡಿಎಸ್‌ಪಿ ಡಿಎಆರ್ ಚಿತ್ರದುರ್ಗ ರವರ ದೂರವಾಣಿ ಸಂಖ್ಯೆ:08194-222181 ಮತ್ತು ಮೊ:9480803106 ಕ್ಕೆ ಸಂಪರ್ಕಿಸಿ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿರುತ್ತದೆ.

18 ಹರಾಜಿನಲ್ಲಿ ಯಶಸ್ವಿಯಾದ ಬಿಡ್‌ದಾರರು ನೆಲಸಮಗೊಳಿಸಿದ ಕಟ್ಟಡಗಳನ್ನು 10 ದಿನದ ಒಳಗಾಗಿ ತೆರವುಗೊಳಿಸಿ ನಿರುಪಯುಕ್ತ ಹಳೆಯ ಸಾಮಾಗ್ರಿಗಳನ್ನು ಕೊಂಡೊಯ್ಯುವ ಮೊದಲು ಗೋಡೆ. ಮಣ್ಣು ಹಾಗೂ ಎಲ್ಲಾ ರೀತಿಯ ಅನುಪಯುಕ್ತ ಸಾಮಾಗ್ರಿಗಳನ್ನು ತಮ್ಮ ಸ್ವಂತ ವೆಚ್ಚದಲ್ಲಿ ತೆರವುಗೊಳಿಸಿ ಸ್ವಚ್ಛಗೊಳಿಸುವುದು. ಅಲ್ಲದೇ ಹಳೆಯ ಸಾಮಾಗ್ರಿಗಳನ್ನು ತೆರವುಗೊಳಿಸುವಲ್ಲಿ ವಿಳಂಬವಾದಲ್ಲಿ ಬಿಡ್‌ದಾರರೇ ಜವಾಬ್ದಾರರಾಗಿರುತ್ತಾರೆ.

19 ಯಶಸ್ವೀ ಬಿಡ್‌ದಾರರು ಟೆಂಡರ್ ಷರತ್ತು ಮತ್ತು ನಿಭಂದನೆಗಳಗೊಂಡ ರೂ 100/- ಗಳ ಕರಾರು ಪತ್ರವನ್ನು ಕಡ್ಡಾಯವಾಗಿ ಡಿಎಸ್‌ಪಿ ಡಿಎಆರ್ ರವರ ಮುಖಾಂತರ ಈ ಕಛೇರಿಗೆ ಸಲ್ಲಿಸುವುದು.

20 ಹರಾಜಿನಲ್ಲಿ ಯಶಸ್ವಿಯಾದ ಬಿಡ್‌ದಾರರು ಅಂತಿಮಗೊಂಡ ಮೊತ್ತದಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ತೆರವುಗೊಳಿಸಲು ಬೇಕಾಗುವ ಯಂತ್ರೋಪಕರಣಗಳ ಬಾಡಿಗೆ. ಕ್ರ್ಯೂ ಆಯಿಲ್ ಚಾರ್ಜ್‌ಸ್ ಅನ್ನು ಹಾಗೂ ಇನ್ನಿತರ ಭತ್ಯೆಗಳನ್ನು ಒಳಗೊಂಡಿರುತ್ತದೆ.

21 ಕಟ್ಟಡಗಳನ್ನು ನೆಲಸಮಗೊಳಿಸುವಲ್ಲಿ ಯಾವುದೇ ರೀತಿ ಅವಘಡಗಳು. ಅಫಘಾತ ಹಾಗೂ ಜೀವ ಹಾನಿ ಸಂಭವಿಸಿದಲ್ಲಿ ಪೊಲೀಸ್ ಇಲಾಖೆಯು ಜವಾಬ್ದಾರಿಯಾಗಿರುವುದಿಲ್ಲ. ಯಶಸ್ವೀ ಬಿಡ್‌ದಾರರೇ ನೇರ ಹೊಣೆಗಾರರಾಗಿರುತ್ತಾರೆ.

22 ಕಟ್ಟಡಗಳನ್ನು ನೆಲಸಮಗೊಳಿಸಿದ ನಂತರ ನಿವೇಶನದ ಜಾಗೆಯನ್ನು ಸ್ವಚ್ಛಗೊಳಿಸುವುದು ಹಾಗೂ ಜಾಗವನ್ನು ಸಮತಟ್ಟುಗೊಳಿಸುವುದು.

23 **ದಿನಾಂಕ:05-01-2021 ರಂದು ಜರುಗುವ ಹರಾಜಿನ ಪ್ರಕ್ರಿಯೆಯು** ಯಾವುದೇ ಕಾರಣಾಂತರಗಳಿಂದ ಮುಂದೂಡುವ ಸಂಭವವಿದ್ದಲ್ಲಿ ಒಂದು ದಿನದ ಮುಂಚಿತವಾಗಿ ದಿನಾಂಕವನ್ನು ಪ್ರಕಟಿಸಲಾಗುವುದು.

3..

24 ಪೊಲೀಸ್ ಅಧೀಕ್ಷಕರು ಚಿತ್ರದುರ್ಗ ಜಿಲ್ಲೆ ರವರು ಟೆಂಡರ್ ಕಮ್ ಬಹಿರಂಗ ಹರಾಜ ಪ್ರಕ್ರಿಯೆಯನ್ನು ಯಾವುದೇ ಕಾರಣ ನೀಡದೇ ಮುಂದೂಡಲು ಹಾಗೂ ನಿಲ್ಲಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.

25 ಕಟ್ಟಡಗಳನ್ನು ನೆಲಸಮಗೊಳಿಸುವಾಗ ಸದರಿ ಕಟ್ಟಡಗಳ ಪಕ್ಕದಲ್ಲಿರುವ ವಸತಿಗೃಹಗಳಲ್ಲಿ ವಾಸಿಸುತ್ತಿರುವ ಅಧಿಕಾರಿ/ಸಿಬ್ಬಂದಿ ರವರಿಗೆ ಯಾವುದೇ ತೊಂದರೆಯಾಗದಂತೆ ನೆಲಸಮಗೊಳಿಸುವ ಪ್ರಕ್ರಿಯೆಯನ್ನು ಯಶಸ್ವಿ ಬಿಡ್‌ದಾರರು ಕೈಗೊಳ್ಳುವುದು. ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ಯಾವುದೇ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸುವುದು.

(ರಾಧಿಕಾ.ಜಿ ಐಪಿಎಸ್)
ಪೊಲೀಸ್ ಅಧೀಕ್ಷಕರು
ಚಿತ್ರದುರ್ಗ ಜಿಲ್ಲೆ
2/12/20

ಗೆ.

1. ಹೆಚ್ಚುವರಿ ಪೊಲೀಸ್ ಅಧೀಕ್ಷಕರು. ಚಿತ್ರದುರ್ಗ ಜಿಲ್ಲೆ. ಮತ್ತು ಜಿಲ್ಲೆಯ ಎಲ್ಲಾ ಡಿವೈಎಸ್‌ಪಿ/ಸಿಪಿಐ/ಪಿಐ/ಪಿಎಸ್‌ಐ. ರವರು ಹರಾಜಿಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಸಾಕಷ್ಟು ರೀತಿಯಲ್ಲಿ ಪ್ರಚಾರ ಕೈಗೊಳ್ಳಲು ಕ್ರಮಕೈಗೊಳ್ಳುವುದು.
2. ಕಂಪ್ಯೂಟರ್ ಶಾಖೆ. ಚಿತ್ರದುರ್ಗ ರವರು ಸದರಿ ಅಧಿಸೂಚನೆಯನ್ನು ಪೊಲೀಸ್ ವೆಬ್‌ಸೈಟ್‌ನಲ್ಲಿ ದಾಖಲಿಸುವ ಬಗ್ಗೆ ಕ್ರಮ ಕೈಗೊಳ್ಳುವುದು.
3. ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಸಾರ್ವಜನಿಕ ಮಾಹಿತಿಗಾಗಿ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ.
4. ಡಿಎಸ್‌ಪಿ ಡಿಎಆರ್ ರವರು ಟೆಂಡರ್ ನಡೆಯುವ ದಿನಾಂಕದಂದು ಹಾಜರಿರತಕ್ಕದು. ಹರಾಜಿನ ವೇಳೆಗೆ ಡಿಎಆರ್ ಆವರಣದಲ್ಲಿ ಎಲ್ಲಾ ಸಿದ್ದತೆಗಳನ್ನು ಮಾಡಿಕೊಳ್ಳಲು ಸೂಚಿಸಲಾಗಿದೆ. ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಬಿಡ್‌ದಾರರು ಭಾಗವಹಿಸಲು ಕ್ರಮಕೈಗೊಳ್ಳುವುದು ಸದರಿ ನೆಲಸಮಗೊಳಿಸಲಾಗುವ ಪೊಲೀಸ್ ವಸತಿ ಗೃಹಗಳ ಕಟ್ಟಡವನ್ನು ವೀಕ್ಷಿಸಲು ಇಚ್ಛಿಸಿದ ಸಾರ್ವಜನಿಕರಿಗೆ ಕಛೇರಿ ವೇಳೆಯಲ್ಲಿ ತೋರಿಸಲು ಸೂಚಿಸಿದೆ. ಹಾಗೂ ಯಶಸ್ವೀ ಬಿಡ್‌ದಾರಿಂದ ಟೆಂಡರ್ ಷರತ್ತು ಮತ್ತು ನಿಬಂಧನೆಗಳಗೊಂಡ ರೂ 100/-ಗಳ ಕರಾರು ಪತ್ರವನ್ನು ಪಡೆದು ಸಲ್ಲಿಸಲು ಸೂಚಿಸಲಾಗಿದೆ. ಹಾಗೂ ಶೇ 25 ರಷ್ಟು ಟೆಂಡರ್ ಮೊತ್ತವನ್ನು ಬಹಿರಂಗ ಹರಾಜು ಪ್ರಕ್ರಿಯೆ ಪೂರ್ಣಗೊಂಡ ಕೂಡಲೇ ಯಶಸ್ವಿ ಟೆಂಡರ್‌ದಾರರು ಪಾವತಿಸಲು ಕ್ರಮಕೈಗೊಳ್ಳುವುದು.
5. ಸೂಚನಾ ಫಲಕ ಜಿಲ್ಲಾ ಪೊಲೀಸ್ ಕಛೇರಿ ಚಿತ್ರದುರ್ಗ.
6. ವಿಷಯ ನಿರ್ವಾಹಕರು ನಗದು ಶಾಖೆ ಜಿಲ್ಲಾ ಪೊಲೀಸ್ ಕಛೇರಿ ಚಿತ್ರದುರ್ಗ ರವರು ಟೆಂಡರ್ ಕಮ್ ಬಹಿರಂಗ ಹರಾಜು ಪ್ರಕ್ರಿಯೆಯಲ್ಲಿ ಖುದ್ದು ಹಾಜರಾಗಿ ಬಿಡ್‌ದಾರಿಂದ ಇ.ಎಂ.ಡಿ ಮೊತ್ತ, ಅಂತಿಮ ಟೆಂಡರ್ ಮೊತ್ತ ಹಾಗೂ ಜಿಎಸ್‌ಟಿ ಮೊತ್ತಗಳನ್ನು ಪಡೆದು ಸರ್ಕಾರಕ್ಕೆ ಜಮಾ ಮಾಡಲು ಸೂಚಿಸಲಾಗಿದೆ.
7. ಜಿಲ್ಲಾ ವಾರ್ತಾಧಿಕಾರಿಗಳು ವಾರ್ತಾ ಮತ್ತು ಪ್ರಚಾರ ಇಲಾಖೆ ಚಿತ್ರದುರ್ಗ ರವರಿಗೆ ದಿನಪತ್ರಿಕೆಗಳಲ್ಲಿ ಪ್ರಸಾರಕ್ಕಾಗಿ ಮುದ್ರಿಸಲು ಕೋರಲಾಗಿದೆ.
8. ಸಿಬಿ ಶಾಖೆಗೆ ಮಾಹಿತಿಗಾಗಿ.
9. ಮಾನ್ಯ ಜಿಲ್ಲಾಧಿಕಾರಿಗಳು ಚಿತ್ರದುರ್ಗ ಜಿಲ್ಲೆ ರವರು ಈ ಅಧಿಸೂಚನೆ ಕುರಿತು ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸುವ ಬಗ್ಗೆ ಅಗತ್ಯ ಕ್ರಮಕೈಗೊಳ್ಳಲು ಕೋರಲಾಗಿದೆ.

<u>ಪ್ರತಿ ಮಾಹಿತಿಗಾಗಿ ಅಭಿನಂದನೆಗಳೊಂದಿಗೆ:-</u>

1. ಡೈರಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್. ಕರ್ನಾಟಕ ರಾಜ್ಯ. ಬೆಂಗಳೂರು ರವರಿಗೆ
2. ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್. ಪೂರ್ವ ವಲಯ. ದಾವಣಗೆರೆ ರವರಿಗೆ.